NGALURU: Union Minister Chemicals and Fertiliz- H.N. Ananth Kumar said e on Friday that the ion government will be quested again to allow ee Naphtha-based urea nufacturers, including ngaluru Chemicals and tilizers Ltd. (MCF), in South to continue pro- ction for another 100 s.

The production deadline the three factories, in- ding MFL and SPIC, ex- ded earlier, would expire t month.

he three factories would e to switch over from htha-based production NG-based production.

le told media that a Cabi- note seeking extension he deadline again would moved in the next Cabi- meeting.

Referring to the MCF, the ister reiterated that the ala government has eed to part land for laying G (liquefied natural gas) eline from Kochi to Man- ru.

t would require three rs to complete the pipe- . Material for laying the eline were ready, he said.

Gadkari was one of the moving spirits behind the changes made to the 2013 Land Act.

RJD's Lalu Prasad Yadav and Prem Gupta participated.

All this came a day after Par-

■ SONIA GANDHI TERMS IT A MOCKERY OF CONSENSUS | PAGE 12

■ 'INDIA NEEDS NATIONAL NUCLEAR SAFETY POLICY' | PAGE 12

# Hindi fits the bill as national language: Governor

Anil Kumar Sastry

**MANGALURU:** Governor Vajubhai Rudabhai Vala on Friday stressed the need for translation of southern regional language literary works, including Kannada, into Hindi to spread the rich literary heritage of these languages across the country.

He was speaking at the inauguration of southern and south western regional official language convention here.

While Hindi unites the country, regional languages strengthen respective regions, he maintained. He said, "While the Ganga flows in the North, the Jnan Ganga (river of knowledge) flows down South. Many eminent writers and saints have authored valuable works in southern languages, Kannada, Tamil, Malayalam and Telugu, which if translated to Hindi, would reach a wider audience."



*Governor Vajubhai Rudabhai Vala after handing over an award at the southern and south western regional official language convention in Mangaluru on Friday.* – PHOTO: H.S. MANJUNATH

Congratulating the Union government for making continuing efforts to spread Hindi across the country, Mr. Vala noted that it did not mean the government is against regional languages. A healthy combination of the both would make a strong India, he maintained.

A nation should have one flag, one emblem, one anthem and one language, Hindi perfectly fits the bill as national language, Mr. Vala said. Moreover 75 per cent of India's population understand Hindi, he added.

On the occasion, several Central government departments, organisations and employees were felicitated for their effort to spread Hindi in their official call.

---



# Use Hindi in govt circulars: Vala

## Says Don't Ignore Language Of State | Everyone Must Learn Hindi

TIMES NEWS NETWORK

**Mangaluru:** Governor Vajubhai Rudabhai Vala pointed out that government circulars and official communication must be printed in Hindi.

"Strengthening Hindi will strengthen the nation," he said, at the inauguration of the Official Language conference held under the aegis of regional implementation office (south and south west), department of official language, Union ministry of home affairs, on Friday.

Over 500 delegates from Karnataka, Andhra Pradesh, Kerala, Tamil Nadu and Union territories of Puducherry and Lakshadweep took part in the event.

"Why aren't our circulars and gazettes in Hindi? During e British rule, all laws were ritten in English. That's how ople started learning English d gaining knowledge of the laws," he said.

Vala said that people should not ignore the language of the state while making Hindi the official language. "Hindi is a language that connects the nation. Being a Gujarati, I have no hatred for other languages. People show enthusiasm towards English, but there should be more interest in every Indian to learn Hindi. Love for the state language should take priority, but one must also be keen on learning the national language too," he added.

He said Hindi can be popularised better through movies and television serials. He called upon writers to translate good literature from South Indian languages into Hindi.

The event was presided over by Snehalata Kumar, secretary, department of official language. Poonam Juneja, joint secretary and Harindra Kumar, director (implementation), were present.

Ravi Posavanike



**WARM WELCOME:** Karnataka governor Vajubhai Vala at the iauguration of Official Language conference in Mangaluru on Friday

# Governor calls for translatin regional works into Hindi

**MANGALURU: Karnataka Governor Vajubhai Rudabhai Vala stressed on the need to translate good literature in South Indian languages to Hindi. There is a need to spread the rich literary legacy and heritage of these languages across the country.**



Governor Vajubai Rudabhai vala addressing the Rajbhasha Sammelan and award distribution (south and south-west reg programme organised by Ministry of Home Affairs, in Mangaluru on Friday. DH PHOTO

Speaking after inaugurating South and South West regional official language conference organised by the Department of Official Language, Ministry of Home Affairs, Town Official Language Implementation Committee, Mangaluru here on Friday, he said that the translation of the works to Hindi will help the people of the country to gain knowledge. Good literature have come out in Kannada, Malayalam, Telugu and Tamil languages. However, majority of the North Indians could not read the best works as it has not been translated to Hindi.

The Governor said that Hindi language unites the people of the whole country. Along with strengthening regional languages, one should strengthen official language—Hindi. People should not show disrespect to regional languages while taking pride over Hindi.

"People have been showing lot of interest in study of English language. The same interest should be shown to learn Hindi. One should develop concern and pride over Hindi language. Knowledge of the land should be disseminated through Hindi language for the whole country to understand. correspondence letters, rules and regulations should be framed in Hindi to popularise and publicise Hindi language. When official correspondences are carried out through Hindi, people will learn the language slowly. Even Gazzette notifications should be published in Hindi," he said.

Stating that 75 per cent of the people in India can converse and understand official language Hindi, he said people watch serials and movies which help in knowing the language. A nation should have one flag, one emblem, one anthem and one language, he added.

Department of Official Language, Ministry of Home Affairs Secretary Snehalatha Kumar said that Hindi has united the people of the country. The language is used in all walks of life by the people. Through Hindi language, the welfare schemes of the Central government could reach the common man. A language is not a medium of expression alone. It also unravels the culture of the land.

The prize money for the Hindi works under "Rajbhasha Gaurav Puraskar" have been hiked to Rs 1 lakh for first prize winner, Rs 74,000 (II), Rs 60,000 (III) and Rs 30,000 (IV). People should develop will power to use Hindi language in work place and for correspondence.

Delegates from the s Karnataka, Andhra Pr Kerala,

Tamil Nadu and Uni ritories of Puducherry an shadweep attended the c ence. Offices of C government and public u takings will be award their excellent performa the official language i mentation work.

**DH News Service**

ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಕೆಥೋಲಿಕ್ ಸಮುದಾಯದವರು ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

### ರಾಜ್ಯಪಾಲ ವಜುಭಾಯಿ ವಾಲಾ ಕಿವಿಮಾತು

# ಹಿಂದಿಯಿಂದ ಅನ್ಯಭಾಷೆ ಅಪಚಾರ ಆಗದಿರಲಿ

ಪ್ರಜಾವಾಣಿ ವಾರ್ತೆ



ಮಂಗಳೂರಿನಲ್ಲಿ ಶುಕ್ರವಾರ ಪ್ರಾದೇಶಿಕ ರಾಜಭಾಷಾ ಸಮ್ಮೇಳನವನ್ನು ಉದ್ಘಾಟಿಸಿದ ರಾಜ್ಯಪಾಲ ವಜುಭಾಯಿ ವಾಲಾ ಮಾತನಾಡಿದರು. ಎ.ಪಿ.ಮಲ್ಹೋತ್ರ, ಪೂನಂ ಜುನೇಜಾ, ಸ್ನೇಹಲತಾ ಕುಮಾರ್, ಮಲಯ್ ಚಟರ್ಜಿ ಮತ್ತಿತರರಿದ್ದಾರೆ. ಪ್ರಜಾವಾಣಿ ಚಿತ್ರ

ಮಂಗಳೂರು: 'ಹಿಂದಿ ಭಾಷೆಯನ್ನು ಬೆಳೆಸುವಾದ ದೇಶದ ಇತರ ಪ್ರಾದೇಶಿಕ ಭಾಷೆಗಳಿಗೆ ಅಪಚಾರ ಆಗದಂತೆ ಎಚ್ಚರ ವಹಿಸಬೇಕು' ಎಂದು ರಾಜ್ಯಪಾಲ ವಜುಭಾಯಿ ವಾಲಾ ಅವರು ಕಿವಿಮಾತು ಹೇಳಿದರು.

ಕೇಂದ್ರ ಗೃಹ ಸಚಿವಾಲಯ, ನಗರದ ಅಧಿಕೃತ ಭಾಷಾ ಅನುಷ್ಠಾನ ಸಮಿತಿ ಹಾಗೂ ದಕ್ಷಿಣ ಮತ್ತು ನೈರುತ್ಯ ಪ್ರಾದೇಶಿಕ ಅನುಷ್ಠಾನ ಕಚೇರಿ ಆಶ್ರಯದಲ್ಲಿ ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರಾದೇಶಿಕ ರಾಜಭಾಷಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಭಾಷೆಯ ವಿಚಾರದಲ್ಲಿ ತಾರತಮ್ಯ ಮಾಡದೆ ಸಮಾನ ಮನೋಭಾವವನ್ನು ಹೊಂದಬೇಕು. ರಾಷ್ಟ್ರದ ಏಕತೆಯ ದೃಷ್ಟಿಯಿಂದ ಹಿಂದಿ ಭಾಷೆಯನ್ನು ಜನಪ್ರಿಯಗೊಳಿಸಬೇಕಾದ ಅಗತ್ಯ ಇದೆ. ಹಿಂದಿ ಬಲಿಷ್ಠವಾದರೆ ಮಾತ್ರ ದೇಶವೂ ಬಲಿಷ್ಠವಾಗಬಲ್ಲುದು. ಹಿಂದಿಯ ಜತೆಯಲ್ಲೇ ಪ್ರಾದೇಶಿಕ ಭಾಷೆಗಳನ್ನೂ ಬೆಳೆಸಬೇಕು' ಎಂದರು.

'ಕನ್ನಡ, ತಮಿಳು, ಮಲಯಾಳ, ತೆಲುಗು ಮೊದಲಾದ ಪ್ರಾದೇಶಿಕ ಭಾಷೆಗಳಲ್ಲಿ ಜ್ಞಾನ ಭಂಡಾರ ಹೇರಳವಾಗಿದೆ. ಉತ್ತರ ಭಾರತದಲ್ಲಿ ಗಂಗೆ ಹರಿದರೆ, ದಕ್ಷಿಣ ಭಾರತದಲ್ಲಿ ಜ್ಞಾನ ಗಂಗೆ ಹರಿಯುತ್ತಿದ್ದಾಳೆ. ಇಲ್ಲಿನ ಜನರ ಜೀವನ ಶೈಲಿಯೂ ಉಜ್ವಲವಾಗಿದೆ. ಈ ದೇಶದ ಶೇ 75ರಷ್ಟು ಮಂದಿ ಹಿಂದಿಯನ್ನು ಬಲ್ಲರು. ಹಾಗಾಗಿ ದಕ್ಷಿಣದ ಭಾಷೆಗಳ ಉತ್ತಮ ಸಾಹಿತ್ಯ ಭಂಡಾರ ಹಿಂದಿಗೆ ಭಾಷಾಂತರ ಆದರೆ ಇಲ್ಲಿನ ಜ್ಞಾನ ಇಡೀ ದೇಶದ ಜನರನ್ನು ತಲುಪಬಲ್ಲುದು. ಸ್ವಂತಕ್ಕಾಗಿ ಬದುಕುವವರು ಪಶುವಿಗೆ ಸಮಾನರು. ಪರೋಪಕಾರಕ್ಕೆ ಬದುಕುವುದು ಮಾನವ ಧರ್ಮ. ಜ್ಞಾನವೂ ಪರೋಪಕಾರಕ್ಕಾಗಿ ಬಳಕೆ ಆಗಬೇಕು' ಎಂದರು.

'ಯಾವುದೇ ಸ್ವತಂತ್ರ ರಾಷ್ಟ್ರಕ್ಕೆ ರಾಷ್ಟ್ರಧ್ವಜ, ರಾಷ್ಟ್ರ ಲಾಂಛನ, ರಾಷ್ಟ್ರ ಪಕ್ಷಿ, ರಾಷ್ಟ್ರೀಯ ಪ್ರಾಣಿ ಇರುವಂತೆ ರಾಷ್ಟ್ರಭಾಷೆಯೂ ಮುಖ್ಯ. ಹಿಂದಿ ನ ರಾಷ್ಟ್ರ ಭಾಷೆ. ಇದಕ್ಕೆ ಸಂವಿಧಾ ಮಾನ್ಯತೆಯೂ ಇದೆ' ಎಂದರು.


ರಾಜಭಾಷಾ ಇಲಾಖೆ ಕಾರ್ಯದ ಸ್ನೇಹಲತಾ ಕುಮಾರ್ ಅಧ್ಯಕ್ಷತೆ ವ ದ್ದರು. ಭಾಷಾ ಇಲಾಖೆಯ ಜ ಕಾರ್ಯ ದರ್ಶಿ ಪೂನಂ ಜುನೇಜ ಕುದುರೆಮುಖ ಕಬ್ಬಿಣ ಮತ್ತು ಅದಿ ಸಂಸ್ಥೆಯ ಮುಖ್ಯ ವ್ಯವಸ್ಥಾಪಕ ನಿರ್ದೇ ಮಲಯ್ ಚಟರ್ಜಿ, ಕಾರ್ಪೊರೇಷ ಬ್ಯಾಂಕಿನ ಮಹಾ ಪ್ರಬಂಧಕ ವಿಜಂ ಕುಮಾರ್ ಮತ್ತಿತರರು ಉಪಸ್ಥಿತರಿದ್ದರ

> 'ಇಂಗ್ಲಿಷ್ ಕಲಿಯುವುದಕ್ಕೆ ತೋರಿಸುವುದಕ್ಕಿಂತ ಹೆಚ್ಚಿನ ಆಸಕ್ತಿಯನ್ನು ಹಿಂದಿ ಭಾಷೆ ಕಲಿಯ ತೋರಿಸಬೇಕಾದ ಅಗತ್ಯ ಇದೆ'
>
> **ವಜುಭಾಯಿ ವಾಲಾ**
> ರಾಜ್ಯಪಾಲರು, ಕರ್ನಾಟಕ

**ಸಂಕ್ಷಿಪ್ತ ಸುದ್ದಿ**

ಇಂದು

## 'ರಿಫೈನರಿ ಇರುವಲ್ಲಿ ಪ್ಲಾಸ್ಟಿಕ್ ಪಾರ್ಕ್'





ಕೇಂದ್ರ ಸರಕಾರದ ಶೇ. 50 ಅನುದಾನ ಬಳಸದ ರಾಜ್ಯ

ಕೋಶಾ... ವೈಫೈ ಸೌ... ಇಂ...

# ಸಶಕ್ತ ಭಾಷೆಯಿಂದ ಬಲಿಷ್ಠ ದೇಶ ನಿರ್ಮಾಣ

## ಪ್ರಾದೇಶಿಕ ಅಧಿಕೃತ ಭಾಷಾ ಸಮ್ಮೇಳನ ಉದ್ಘಾಟಿಸಿ ರಾಜ್ಯಪಾಲ ವಜೂಭಾಯಿ ರುಡಾಭಾಯಿ

**ವಿಕ ಸುದ್ದಿಲೋಕ** ಮಂಗಳೂರು

ಶಕ್ತಿಯುತ ದೇಶ ನಿರ್ಮಾಣಕ್ಕಾಗಿ ಮಾತೃ ಭಾಷೆಯನ್ನು ಬಲಗೊಳಿಸುವುದು ಅಗತ್ಯ. ಭಾಷೆ ಬಲಿಷ್ಠವಾದರೆ ದೇಶ ಬಲಿಷ್ಠವಾಗುತ್ತದೆ. ಇತರ ಭಾಷೆಗಳಿಗೆ ಗೌರವ ನೀಡುವುದರ ಜತೆಗೆ ಹಿಂದಿ ಭಾಷೆಯನ್ನು ಸಶಕ್ತಗೊಳಿಸಲು ನಾವೆಲ್ಲರೂ ಕೈಜೋಡಿಸಬೇಕು ಎಂದು ಕರ್ನಾಟಕ ರಾಜ್ಯಪಾಲ ವಜೂಭಾಯಿ ರುಡಾಭಾಯಿ ವಾಲಾ ಹೇಳಿದರು.

ನಗರದ ಹೋಟೆಲ್ ಓಶಿಯನ್ ಪರ್ಲ್ ಸಭಾಂಗಣದಲ್ಲಿ ಅಧಿಕೃತ ಭಾಷಾ ಅನುಷ್ಠಾನ ಸಮಿತಿ ಮತ್ತು ಪ್ರಾದೇಶಿಕ ಅನುಷ್ಠಾನ ಕಚೇರಿ(ದಕ್ಷಿಣ ಮತ್ತು ನೈಋತ್ಯ) ವತಿಯಿಂದ ಪ್ರಾದೇಶಿಕ ಅಧಿಕೃತ ಭಾಷಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಇತರ ರಾಜ್ಯ ಭಾಷೆಗಳನ್ನು ಗೌರವಿಸಬೇಕು. ಎಲ್ಲ ಭಾಷೆಗಳ ಉತ್ಕೃಷ್ಟ ಜ್ಞಾನಗಳನ್ನು ದೇಶಾದ್ಯಂತ ಜೋಡಿಸಲು ದೇಶದ ಮಾತೃ ಭಾಷೆಗೆ ಸಾಧ್ಯವಿದೆ. ಇದಕ್ಕೆ ಪೂರಕವಾಗಿ ಹಿಂದಿ ಭಾಷೆಯ ಪ್ರಚಾರ, ಪ್ರಸಾರ ಇನ್ನಷ್ಟು ಆಗಬೇಕು ಎಂದು ಅವರು ಅಭಿಪ್ರಾಯಪಟ್ಟರು.

**ಹಿಂದಿಯಲ್ಲಿ ಮೂಡಿ ಬರಲಿ:** ಸರಕಾರಿ ಅಧಿಸೂಚನೆಗಳು ಹಾಗೂ ಕಾನೂನು ಇಂಗ್ಲಿಷ್‌ನಲ್ಲಿ ಬಂದ ಕಾರಣ ಇಂಗ್ಲಿಷ್ ಭಾಷೆ ಹೆಚ್ಚು ಪ್ರಸಾರ ಕಂಡಿತು. ಇನ್ನು ಮುಂದೆ ಸರಕಾರಿ ಅಧಿಸೂಚನೆ ಹಾಗೂ ಕಾನೂನುಗಳನ್ನು ಹಿಂದಿಯಲ್ಲಿ ತರುವ ಮೂಲಕ ಹಿಂದಿ ಭಾಷೆಯನ್ನು ಬಲಿಷ್ಠಗೊಳಿಸುವ ಪ್ರಯತ್ನ ಆಗಬೇಕು ಎಂದರು.

**ಏಕತೆ ಸಂಕೇತ:** ದೇಶಕ್ಕೆ ಸ್ವತಂತ್ರವಾದ ಧ್ವಜ, ಚಿಹ್ನೆ, ಪಶು, ಪಕ್ಷಿ ಇದ್ದ ಹಾಗೆ ರಾಷ್ಟ್ರಭಾಷೆ ಹಿಂದಿಯಾಗಿದೆ. ಯಾವುದೇ ಭಾಷೆಗಿಂತಲೂ ವಿಶೇಷವಾಗಿ ಇಂಗ್ಲಿಷ್‌ಗಿಂತಲೂ ಹಿಂದಿಯನ್ನು ಅಪ್ಯಾಯಮಾನವಾಗಿ ಕಲಿಯುವ ಮನೋಭಾವ ಹಾಗೂ ಅಪೇಕ್ಷೆ ನಮ್ಮಲ್ಲಿ ಮೂಡಿಬರಬೇಕು. ನಮ್ಮ ಭಾಷೆ ದೇಶದ ಏಕತೆಯ ಸಂಕೇತವಾಗಿದೆ ಎಂದು ಅವರು ಹೇಳಿದರು.

**ನಾನಾ ಭಾಷೆ-ವೇಷ:** ನಮ್ಮಲ್ಲಿ ನಾನಾ ಭಾಷೆ, ನಾನಾ ವೇಷಭೂಷಣಗಳಿವೆ. ಆದರೆ ದೇಶ ಮಾತ್ರ ಒಂದೇ. ವ್ಯಕ್ತಿ, ಗ್ರಾಮ, ರಾಜ್ಯ, ರಾಷ್ಟ್ರ ಬಲಶಾಲಿಯಾಗಬೇಕಾದರೆ, ಆಯಾ ಭಾಷೆಗಳು ಬಲಗೊಳ್ಳಬೇಕು. ಇದರ ಮೂಲಕ ದೇಶದ ಭಾಷೆಯನ್ನು ಬಲಿಷ್ಠಗೊಳಿಸುವುದಕ್ಕೆ ನಾವು ಶ್ರಮಿಸಬೇಕು ಎಂದು ಅವರು ಹೇಳಿದರು.

ಪಶುಗಳು ಆಹಾರ ತಿಂದು, ನೀರು ಕುಡಿದು ಮಲಗುತ್ತವೆ. ಅದಕ್ಕೆ ಭಾಷೆಯ ಅಗತ್ಯವಿಲ್ಲ. ಆದರೆ ಮನುಷ್ಯ ಜೀವನ ಹಾಗಲ್ಲ. ಜೀವನದಲ್ಲಿ ನಿಶ್ಚಿತ ಗುರಿಬೇಕು. ಜ್ಞಾನವನ್ನು ಇತರರಿಗೆ ಹಂಚಬೇಕು. ದೇಶಕ್ಕೆ ಏನಾದರೂ ಕೊಡುಗೆ ನೀಡಬೇಕು. ಆಗ ಮಾತ್ರ ನೈಜ ಮನುಷ್ಯನಾಗುತ್ತಾನೆ ಎಂದರು.

ಅಪಾರವಾದ ಜ್ಞಾನ ಗಂಗೆ ದಕ್ಷಿಣ ಭಾರತದಲ್ಲಿ ಇದೆ. ವಿಶ್ವವೇ ನಮ್ಮ ಕುಟುಂಬ, ಸರ್ವರ ಸುಖವನ್ನು ಬಯಸುವ ವಿಶಾಲ ಮನೋಭಾವದ ಉತ್ಕೃಷ್ಟ ಸಾಹಿತ್ಯ ದಕ್ಷಿಣ ಭಾರತದಿಂದ ಹುಟ್ಟಿಕೊಂಡಿದೆ. ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ಉತ್ಕೃಷ್ಟ ಸಾಹಿತ್ಯಗಳು ಮೂಡಿಬಂದಿವೆ. ಇಂತಹ ಸಾಹಿತ್ಯ ಕೃತಿಗಳು ಹಿಂದಿ ಭಾಷೆಯಲ್ಲಿ ಅನುವಾದಗೊಂಡರೆ, ಎಲ್ಲರಿಗೂ ಓದಲು ಸಾಧ್ಯವಿದೆ. ಈ ಕೆಲಸ ಆಗಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸರಕಾರದ ಅಧಿಕೃತ ಭಾಷಾ ಇಲಾಖೆ ಕಾರ್ಯದರ್ಶಿ ಸ್ನೇಹಲತಾ ಕುಮಾರ್ ಮಾತನಾಡಿ, ಭಾಷೆಯು ನಮ್ಮ ಸಂಸ್ಕೃತಿ, ಸಂಸ್ಕಾರದೊಂದಿಗೆ ಬೆಸೆದಿದೆ. ಜೀವನ ಮೌಲ್ಯದೊಂದಿಗೆ ಸಾಂಸ್ಕೃತಿಕವಾಗಿ ದೇಶವನ್ನು ಜೋಡಿಸುವ ಕೆಲಸವನ್ನು ಭಾಷೆ ಮಾಡುತ್ತಿದೆ. ದೇಶಾದ್ಯಂತ ಹಿಂದಿ ಭಾಷೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಭಾಷಾ ವಿಭಾಗ ಸಾಕಷ್ಟು ಕೆಲಸಗಳನ್ನು ಮಾಡುತ್ತಿದೆ ಎಂದರು.

ಹಿಂದಿಯಲ್ಲಿ ಮೌಲ್ಯಯುತ ಕೃತಿಗಳನ್ನು ಬರೆದರೆ ಅದಕ್ಕೆ ಪ್ರಥಮ ಬಹುಮಾನ ಒಂದು ಲಕ್ಷ ರೂ., ದ್ವಿತೀಯ 50 ಸಾವಿರ, ತೃತೀಯ 30 ಸಾವಿರ ಹೀಗೆ ನಗದು ಪುರಸ್ಕಾರಗಳನ್ನು ನೀಡಲಾಗುತ್ತಿದೆ. ದೇಶದ 350 ಕಡೆಗಳಲ್ಲಿ ರಾಜ್ಯ ಭಾಷಾ ಸಮಿತಿಗಳು ಹಿಂದಿ ಭಾಷೆಯ ಅನುಷ್ಠಾನದ ಬಗ್ಗೆ ಕಾರ್ಯನಿರ್ವಹಿಸುತ್ತಿವೆ ಎಂದರು.

ಜಂಟಿ ಕಾರ್ಯದರ್ಶಿ ಪೂನಂ ಜುನೇಜಾ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೆಐಒಸಿಎಲ್ ಅಧ್ಯಕ್ಷ ಮಲಾಯ್ ಚಟರ್ಜಿ, ಕಾರ್ಪೊರೇಶನ್ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಎ.ಪಿ.ಮಲ್ಹೋತ್ರಾ ಮುಖ್ಯ ಅತಿಥಿಯಾಗಿದ್ದರು. ಪ್ರಾದೇಶಿಕ ಅನುಷ್ಠಾನ ಕಚೇರಿ ಉಪ ನಿರ್ದೇಶಕ ವಿಜಯ ಕುಮಾರ್ ಉಪಸ್ಥಿತರಿದ್ದರು.

ಹರೀಂದ್ರ ಕುಮಾರ್ ವಂದಿಸಿದರು. ಸತ್ಯೇಂದ್ರ ಡಿ. ಕಾರ್ಯಕ್ರಮ ನಿರೂಪಿಸಿದರು. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ ಹಾಗೂ ಲಕ್ಷದ್ವೀಪದ ಕೇಂದ್ರ ಸರಕಾರದ ಕಾರ್ಯಾಲಯ, ಸಾರ್ವಜನಿಕ ಸಂಸ್ಥೆ, ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖ್ಯಸ್ಥರ ಸಹಿತ ಒಟ್ಟು 500 ಮಂದಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಇದೇ ಸಂದರ್ಭ ಆಡಳಿತ ಭಾಷಾ ಉತ್ಕೃಷ್ಟ ಅನುಷ್ಠಾನಕ್ಕಾಗಿ ಪುರಸ್ಕಾರ ಹಾಗೂ ಪ್ರಮಾಣ ಪತ್ರಗಳನ್ನು ಕರ್ನಾಟಕ ರಾಜ್ಯಪಾಲ ವಾಜೂಭಾಯಿ ರುಡಾಭಾಯಿ ವಾಲಾ ಪ್ರದಾನ ಮಾಡಿದರು.



ಪ್ರಾದೇಶಿಕ ಅಧಿಕೃತ ಭಾಷಾ ಸಮ್ಮೇಳನದಲ್ಲಿ ರಾಜ್ಯಪಾಲ ವಜೂಭಾಯಿ ರುಡಾಭಾಯಿ ವಾಲಾ ಪ್ರಮಾಣ ಪತ್ರ ವಿತರಿಸಿದರು.

### ಹಿಂದಿ ಸಿನೆಮಾ, ಸೀರಿಯಲ್ ನೋಡಿ

ಹಿಂದಿ ಸಿನೆಮಾ, ಸೀರಿಯಲ್ ನೋಡುವುದರಿಂದ ಹಿಂದಿ ಭಾಷಾ ಪ್ರಸಾರ ಹೆಚ್ಚುತ್ತದೆ. ದೇಶದ ಶೇ.75ರಷ್ಟು ಮಂದಿಗೆ ಹಿಂದಿ ಭಾಷೆ ಮಾತನಾಡಲು, ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆ. ಇದರ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು. ದೇಶಕ್ಕಾಗಿ ಅನೇಕರು ಬಲಿದಾನ ಮಾಡಿದ್ದಾರೆ. ಆದರೆ ನಾವು ಬಲಿದಾನ ಮಾಡುವ ಅಗತ್ಯವಿಲ್ಲ. ನಮ್ಮ ಭಾಷೆಗಾಗಿ ಸ್ವಲ್ಪ ಸಮಯವನ್ನು ನೀಡಬೇಕು ಎಂದರು.



ಸಂಯುಕ್ತ ಕ್ಷೇತ್ರೀಯ ರಾಜ ಭಾಷಾ ಸಮ್ಮೇಳನವನ್ನು ರಾಜ್ಯಪಾಲ ವಜೂಭ್ಯಾ ರುಡಾಭ್ಯಾ ವಾಲಾ ಉದ್ಘಾಟಿಸಿದರು.

# ದೇಶ ಬೆಸೆವ ರಾಷ್ಟ್ರಭಾಷೆ: ರಾಜ್ಯಪಾಲ

ಮಂಗಳೂರು, ಮಾ. 27: ರಾಷ್ಟ್ರಭಾಷೆ ದೇಶವನ್ನು ಏಕತೆಯ ಸೂತ್ರದಲ್ಲಿ ಬೆಸೆಯುತ್ತದೆ. ಆದುದರಿಂದ ರಾಜ್ಯ ಭಾಷೆಗಳನ್ನು ಗೌರವಿಸುತ್ತಾ ರಾಷ್ಟ್ರಭಾಷೆ ಹಿಂದಿಯ ಸಶಕ್ತೀಕರಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರ್ನಾಟಕದ ರಾಜ್ಯಪಾಲ ವಜೂಭ್ಯಾ ರುಡಾಭ್ಯಾ ವಾಲಾ ಅವರು ಕರೆ ನೀಡಿದರು.

ಮಂಗಳೂರಿನ ನಗರ ಅಧಿಕೃತ ಭಾಷಾ ಅನುಷ್ಠಾನ ಸಮಿತಿ ಹಾಗೂ ಪ್ರಾದೇಶಿಕ ಅನುಷ್ಠಾನ ಕಚೇರಿ ಆಶ್ರಯದಲ್ಲಿ ಭಾರತ ಸರಕಾರದ ಗೃಹಸಚಿವಾಲಯದ ರಾಜಭಾಷಾ ವಿಭಾಗದ ದಕ್ಷಿಣ ಮತ್ತು ನೈಋತ್ಯ ಕ್ಷೇತ್ರಗಳ ಸಂಯುಕ್ತ ಕ್ಷೇತ್ರೀಯ ರಾಜಭಾಷಾ ಸಮ್ಮೇಳನವನ್ನು ಅವರು ನಗರದ ಹೊಟೇಲ್ ಓಷನ್‌ಪರ್ಲ್ ಸಭಾಂಗಣದಲ್ಲಿ ಶುಕ್ರವಾರ ಉದ್ಘಾಟಿಸಿದರು.

**ಸಮಾನ ಗೌರವ ಇರಲಿ**

ವಿವಿಧ ರಾಜ್ಯಭಾಷೆ, ಸಂಸ್ಕೃತಿಗಳ ರಾಷ್ಟ್ರ ನಮ್ಮದು. ರಾಷ್ಟ್ರಭಾಷೆಯ ಜತೆಗೆ ರಾಜಭಾಷೆ ಕೂಡ ಮಹತ್ವದ್ದು. ಸಂಸತ್‌ನಲ್ಲಿ ಹಿಂದಿಯಲ್ಲಿ ಆಗುವ ಪ್ರಶ್ನೋತ್ತರ, ಭಾಷಣಗಳನ್ನು ರಾಜ್ಯಭಾಷೆಗಳಲ್ಲಿ ಹಾಗೂ ರಾಜ್ಯಭಾಷೆಗಳಲ್ಲಿ ಕೇಳುವ ಪ್ರಶ್ನೆ, ಭಾಷಣಗಳನ್ನು ಹಿಂದಿಗೆ ತರ್ಜುಮೆಗೊಳಿಸಿ ಕೇಳಿಸುವ ವ್ಯವಸ್ಥೆ ಇದೆ. ಕರ್ನಾಟಕ ವಿಧಾನಸಭೆಯಲ್ಲಿ ನಾನು ಹಿಂದಿಯಲ್ಲಿ ಭಾಷಣ ಮಾಡಿದಾಗ ಅದರ ಕನ್ನಡ ಹಾಗೂ ಇಂಗ್ಲಿಷ್ ಪ್ರತಿಯನ್ನು ಎಲ್ಲ ಶಾಸಕರಿಗೂ ನೀಡಿದ್ದೆ. ಎಲ್ಲ ರಾಜ್ಯಭಾಷೆ ಸಮೃದ್ಧಿ ಕಾಣಬೇಕು. ಅವುಗಳನ್ನು ಸಮಾನ ಗೌರವದಿಂದ ನೋಡಬೇಕು ಎಂಬುದು ನಮ್ಮ ಧ್ಯೇಯ. ಇದರ ಜತೆಗೆ ರಾಷ್ಟ್ರವನ್ನು ಒಂದು ಸೂತ್ರದಡಿ ಜೋಡಿಸುವ ಭಾಷೆಯಾಗಿ ಹಿಂದಿ ಭಾಷೆಯನ್ನು ಸದೃಢಗೊಳಿಸುವ ಕಾರ್ಯವೂ ನಡೆಯಬೇಕು ಎಂದು ಅವರು ಹೇಳಿದರು.

**ರಾಷ್ಟ್ರ ಸದೃಢಗೊಳಿಸೋಣ**

ನಮ್ಮ ದೇಶದಲ್ಲಿ ರಾಜ್ಯಭಾಷೆ ಜತೆಗೆ ಆಂಗ್ಲಭಾಷೆಯನ್ನು ಇಷ್ಟಪಟ್ಟು ಸ್ವೀಕರಿಸಲಾಗುತ್ತದೆ. ಅದೇ ಮಾದರಿಯಲ್ಲಿ ಹಿಂದಿಯನ್ನು ಪ್ರಥಮ ಪ್ರಾಶಸ್ತ್ಯದಲ್ಲಿ ರಾಜಭಾಷೆಗಳ ಜತೆಗೆ ಸ್ವೀಕರಿಸುವ ಮನೋಭಾವ ಬೆಳೆಯಬೇಕು. ಹಿಂದಿ ಭಾಷೆಯ ಸದೃಢತೆ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ...

## ದಕ್ಷಿಣ ಭಾರತದ ಸಾಹಿತ್ಯಗಳು ಹಿಂದಿಗೆ ಅನುವಾದಗೊಳ್ಳಲಿ

ಕನ್ನಡ, ಮಲೆಯಾಳ, ತೆಲುಗು ಸೇರಿದಂತೆ ದಕ್ಷಿಣ ಭಾರತದ ಭಾಷೆಗಳಲ್ಲಿ ಶ್ರೇಷ್ಠ ಕೃತಿಗಳು, ಸಾಹಿತ್ಯಗಳು ರಚನೆಯಾಗಿವೆ. ಅನೇಕ ಸಂತರು, ಜ್ಞಾನಿ, ಸಾಹಿತಿಗಳು ಜ್ಞಾನ ಪ್ರಸಾರದಲ್ಲಿ ಶ್ರೇಷ್ಠ ಕಾರ್ಯ ಮಾಡಿದ್ದಾರೆ. ಉದಾತ್ತ ಸಂದೇಶ ನೀಡಿದ್ದಾರೆ. ಇದರ ಪ್ರಯೋಜನ ಉತ್ತರ ಭಾರತದ ಜನರಿಗೂ ಸಿಗುವಂತಾಗಲು ಈ ಕೃತಿ, ಸಾಹಿತ್ಯಗಳು ಹಿಂದಿಭಾಷೆಗೆ ಅನುವಾದಗೊಳ್ಳಬೇಕು. ಈ ನಿಟ್ಟಿನಲ್ಲೂ ಕಾರ್ಯಕ್ರಮಗಳು ನಡೆಯುವುದು ಅಗತ್ಯ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.

ಆದುದರಿಂದ ನಾವೆಲ್ಲರೂ ಒಟ್ಟುಸೇರಿ ಹಿಂದಿ ಬೆಳೆಸೋಣ. ರಾಷ್ಟ್ರ ಸದೃಢಗೊಳಿಸೋಣ ಎಂದು ಅವರು ಹೇಳಿದರು.

ರಾಜಭಾಷೆ ಅನುಷ್ಠಾನದಲ್ಲಿ ವಿಶೇಷ ಸಾಧನೆಗೈದವರಿಗೆ ಗೃಹಸಚಿವಾಲಯದ ರಾಜಭಾಷಾ ವಿಭಾಗದಿಂದ ಕೊಡಮಾಡುವ ಪುರಸ್ಕಾರಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಗೃಹಸಚಿವಾಲಯದ ರಾಜಭಾಷಾ ವಿಭಾಗದ ಕಾರ್ಯದರ್ಶಿ ಸ್ನೇಹಲತಾ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಹಿಂದಿ ಭಾಷೆಯ ಅನುಷ್ಠಾನದ ನಿಟ್ಟಿನಲ್ಲಿ ಸರಕಾರದ ರಾಜಭಾಷಾ ಗೌರವ ಪುರಸ್ಕಾರ, ಹಿಂದಿ ಪುಸ್ತಕ ಪುರಸ್ಕಾರ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಅವರು ವಿವರಿಸಿದರು.

ಜಂಟಿ ಕಾರ್ಯದರ್ಶಿ ಪೂನಂ ಜುನೇಜಾ, ಕೆಐಒಸಿಎಲ್ ಅಧ್ಯಕ್ಷ ಮತ್ತು ಆಡಳಿತ ನಿರ್ದೇಶಕ ಮಲಯ್ ಚಟರ್ಜಿ ಅತಿಥಿಯಾಗಿದ್ದರು. ಕಾರ್ಪೊರೇಶನ್ ಬ್ಯಾಂಕ್‌ನ ಮಹಾಪ್ರಬಂಧಕ ಎ.ಪಿ. ಮಲ್ಹೋತ್ರಾ, ಪ್ರಾದೇಶಿಕ ಅನುಷ್ಠಾನ ಕಚೇರಿಯು ...



ಸಂಯುಕ್ತ ಕ್ಷೇತ್ರೀಯ ರಾಜ ಭಾಷಾ ಸಮ್ಮೇಳನವನ್ನು ರಾಜ್ಯಪಾಲ ವಜೂಭ್ಯಾ ರುಡಾಭ್ಯಾ ವಾಲಾ ಉದ್ಘಾಟಿಸಿದರು.